(ಉ) ಮಧುಗಿರಿಯ ಆರ್ಯ ಹರಿಜನರ ವಿದ್ಯಾರ್ಥಿನಿಲಯದ ಬಳಿ ಬೋರ್‌ವೆಲ್ ಹಾಕಿಸುವ ಬಗ್ಗೆ.

+ಶ್ರೀ ಗಂಗಹನುಮಯ್ಯ(ಮಧುಗಿರಿ):- ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರವಾದ ಮಧುಗಿರಿಯಲ್ಲಿ ಆರ್ಯ ಹರಿಜನರ ವಿದ್ಯಾರ್ಥಿನಿಲಯ ಕಟ್ಟಡ ಕಟ್ಟುವುದಕ್ಕೆ ಸರ್ಕಾರದಿಂದ 1994–95ನೇ ಸಾಲಿನಲ್ಲಿ 25 ಸಾವಿರ ರೂಪಾಯಿಗಳು ಮತ್ತು 1995–96ನೇ ಸಾಲಿನಲ್ಲಿ 50 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದು, ಸದರಿ ಕೆಲಸ ಸ್ಥಗಿತಗೊಂಡಿದ್ದರಿಂದ, ಅಲ್ಲದೆ ಬೆಂಕಿಪುರ ಗ್ರಾಮದ ಜನರಿಗೆ ಕುಡಿಯುವ ನೀರಿನ ಬವಣೆ ಇದ್ದುದರಿಂದ ವಿದ್ಯಾರ್ಥಿ ನಿಲಯವಿರುವ ಜಾಗದಲ್ಲಿ ಒಂದು ಬೋರ್‌ವೆಲ್ ಕೊರೆಸಿಕೊಡಬೇಕೆಂದು ಆಂದಿನ ಜಿಲ್ಲಾಧಿಕಾರಿಗಳಾಗಿದ್ದ ಶ್ರೀಮತಿ ಆರ್.ಎಸ್. ಸುಜಾತರವರಿಗೆ ಕೋರಿಕೊಂಡಿದ್ದೆ. ಆದರೆ, ದುರದೃಷ್ಟವಶಾತ್ ಶ್ರೀಮತಿ ಸುಜಾತ ರವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾಗ ತಮ್ಮ ಅರೆ ಸರ್ಕಾರಿ ಪತ್ರದ ಸಂಖ್ಯೆ: ಟಿಡಬ್ಲ್ಯೂಸಿ–ಪಿಡಿಎಂ–ಡಿವಿಎಫ್–95–96 ದಿನಾಂಕ 27.5.1996ರ ಪತ್ರದಲ್ಲಿ "The request of Sri Gangahanumaiah, M.L.A., for a borewell near his site in Madhugiri town to help him construct a building out of Scarcity fund was refused during my period." ಎಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ಆದರೆ, ಮಧುಗಿರಿ ಕ್ಷೇತ್ರದ ವ್ಯಾಪ್ತಿಯಲ್ಲಿ ನನ್ನ ಹೆಸರಿಗೆ ಯಾವುದೇ ಜಮೀನಾಗಲೀ, ಮನೆಯಾಗಲೀ ಅಥವಾ ನಿವೇಶನವಾಗಲೀ ಇರುವುದಿಲ್ಲ. ಅಲ್ಲದೆ, ಈ ಕುರಿತು ಮಧುಗಿರಿಯ ತಹಶೀಲ್ದಾರ್‌ರವರು ಮತ್ತು ಪುರಸಭೆಯ ಕಾರ್ಯಾಲಯದವರು ಸಹ ದೃಢೀಕರಣ ಪತ್ರ ಕೊಟ್ಟಿರುವುದರಿಂದ, ಶ್ರೀಮತಿ ಸುಜಾತರವರು ನನ್ನ ಮೇಲೆ ಸೇಡಿನ ಮನೋಭಾವ-ವಿಟ್ಟುಕೊಂಡು ನನ್ನ ಹೆಸರಿಗೆ ಕಳಂಕ ತರುವ ಉದ್ದೇಶದಿಂದ ಸರ್ಕಾರಕ್ಕೆ ಈ ವರದಿಯನ್ನು ಕೊಟ್ಟಿ-ದ್ದಾರೆ. ಆಥವಾ ನನ್ನನ್ನು ಅಮಾನತ್ತುಗೊಳಿಸಬೇಕೆಂದು ವರದಿ ಕೊಟ್ಟಿದ್ದಾರೋ ಅಥವಾ ನನ್ನನ್ನು ಏನು ಮಾಡಬೇಕೆಂದು ವರದಿಯನ್ನು ಏಕೆ ಕೊಟ್ಟಿದ್ದಾರೆಂದು ಗೊತ್ತಿಲ್ಲ. ಆದರೂ ಸಹ ಅವರು ಅಲ್ಲಿ ಜಿಲ್ಲಾಧಿಕಾರಿಗಳಾಗಿ ಎಂಟು ತಿಂಗಳಿನಲ್ಲಿ ಅವರು ಮಾಡಿರುವ ಘನ ಕಾರ್ಯದ ಬಗ್ಗೆ ಮತ್ತು ಅವರು ನಡೆದುಕೊಂಡಿರತಕ್ಕ ರೀತಿಯನ್ನು ತೋರಿಸಲು ಬರೆದಿರತಕ್ಕ ಪತ್ರದ ಒಂದು ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಇದರ ಬಗ್ಗೆ ತಾವು ಕ್ರಮ ಕೈಗೊಂಡು ಅವರನ್ನು ಅಮಾನತ್ತುಗೊಳಿಸಬೇಕು ಇಲ್ಲವೇ ವಜಾಗೊಳಿಸಬೇಕು ಅಥವಾ ಸಿ.ಓ.ಡಿ. ಯಿಂದಾಗಲೀ ಅಥವಾ ಲೋಕಾಯುಕ್ತದಿಂದಾಗಲೀ ಆ ಕುರಿತು ತನಿಖೆ ಮಾಡಿಸಿ ಸತ್ಯ ಸಂಗತಿಯನ್ನು ಬೆಳಕಿಗೆ ತರಬೇಕು. ಒಂದು ವೇಳೆ ನನ್ನಲ್ಲೇನಾದರೂ ತಪ್ಪಿದ್ದರೆ ನನಗೂ ಕೂಡ ತಾವು ಶಿಕ್ಷೆ ವಿಧಿಸಬೇಕು. ಈ ವಿಷಯ ಈಗಾಗಲೇ ಸಾರ್ವಜನಿಕರ ಗಮನಕ್ಕೆ ಬಂದಿದ್ದು ನನ್ನ ಹೆಸರಿಗೆ ಕಳಂಕ ಬರುವುದರಿಂದ ದಯಮಾಡಿ ತಾವು ಇದರ ಬಗ್ಗೆ ಸರಿ-ಯಾದಂಥ ಕ್ರಮ ತೆಗೆದುಕೊಂಡು ಅವರನ್ನು ಅಮಾನತ್ತುಗೊಳಿಸುವ ಮೂಲಕ ಕ್ರೂರ ಕ್ರಮ ತೆಗೆದು-ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಪತ್ರದ ಪ್ರತಿಯನ್ನು ತಮಗೆ ಕಳುಹಿಸಿ ಕೊಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಈ ಹಿಂದೆ ನಾನು ಹಾಗೂ ಜಾಲಪ್ಪನವರು ಸಮೀಕ್ಷೆ ಮಾಡಲು ಹೇಳಿದ ಸಂದರ್ಭದಲ್ಲಿ ಶಾಸಕರಾದ ಮಾನ್ಯ ಗಂಗಹನುಮಯ್ಯನವರು ಈ ವಿಷಯ ಪ್ರಸ್ತಾಪಿಸಿದ್ದರು. ಇದು ನೇರವಾಗಿ ಕಂದಾಯ ಇಲಾಖೆಗೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಸಂಬಂಧಿಸಿದೆ. ಶ್ರೀಮತಿ ಸುಜಾತರವರು ಸ್ವಲ್ಪ ದಿವಸಗಳ ಕಾಲ ಅಲ್ಲಿ ಜಿಲ್ಲಾ ಆಡಳಿತಾಧಿಕಾರಿಯಾಗಿದ್ದರು, ಆ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳು ಉದ್ಭವಿಸಿದ್ದು ನಂತರ ಅವರು ಜಿಲ್ಲಾಧಿಕಾರಿಗಳಾಗಿದ್ದರು. ಪ್ರಾಯಶಃ ಅವರು ಪತ್ರವನ್ನು ಬರೆದು ಕಳುಹಿಸಿದನಂತರ ಅವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ನಿರ್ದೇಶಕರಾಗಿ ವರ್ಗವಾಗಿ ಹೋದರು. ಆದುದರಿಂದ, ದಯಮಾಡಿ ತಾವು ಆ ಕುರಿತ ಮಾಹಿತಿಯನ್ನು ಕಳುಹಿಸಿಕೊಟ್ಟರೆ ನಾನು ಮತ್ತು ಕಂದಾಯ ಇಲಾಖೆಯ ಮಂತ್ರಿಗಳು ಗಮನಿಸಿ ಅದಕ್ಕೆ ಉತ್ತರ ಕಳುಹಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಇವೊತ್ತು ನಮಗೆ ಒಂದು ರೀತಿಯ ದಿಗಿಲು ಬಂದಂತಾಗಿದೆ ಕೃಷ್ಣಾ ಯೋಜನೆಗೆ. . .

ಉಪಾಧ್ಯಕ್ಷರು:- ತಾವು ಶಿಕ್ಷಣ ಬಗ್ಗೆ ಮಾತನಾಡುತ್ತೇನೆಂದು ಹೇಳಿದ್ದೀರಲ್ಲಾ.

(ಊ) ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರದಿಂದ ಧನ ಸಹಾಯ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ 200 ಕೋಟಿ ರೂಪಾಯಿಗಳಷ್ಟು ಹಣವನ್ನು ಸಹಾಯ ಮಾಡುತ್ತದೆಂದು ನಮ್ಮ ಸರ್ಕಾರ ಭಾರಿ ನೀರಾವರಿ ಸಚಿವರು ಈಗಾಗಲೇ ಅನೇಕ ಕಡೆಗಳಲ್ಲಿ ಹೇಳಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ತಿಳಿದು ಬಹಳ ಸಂತೋಷವಾಗಿತ್ತು. ಆದರೆ, ಪ್ರಧಾನಮಂತ್ರಿಗಳು ಆ ಹಣವನ್ನು ಇನ್ನೂ ಮಂಜೂರು ಮಾಡಿಲ್ಲವೆಂಬ ಬಗ್ಗೆ ಒಂದು ಕಡೆ ಹೇಳಿದ್ದರೆ ಮತ್ತೊಂದು ಕಡೆ ಕರ್ನಾಟಕಕ್ಕೆ ಆ ಹಣವನ್ನು ಬಿಡುಗಡೆ ಮಾಡುವುದಾದರೆ ಸಂಯುಕ್ತ ರಂಗಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದು ಕೊಳ್ಳಬೇಕಾಗುತ್ತದೆಂಬ ಬೆದರಿಕೆಯನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಒಡ್ಡುತ್ತಿದ್ದು, ಇದು ಒಳ್ಳೆಯ ನೀತಿಯಲ್ಲ. ಆ ಬೆದರಿಕೆಯ ತಂತ್ರಕ್ಕೆ ಕರ್ನಾಟಕವಾಗಲೀ, ಕೇಂದ್ರ ಸರ್ಕಾರವಾಗಲೀ ಬಗ್ಗಬಾರದು. ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ 200 ಕೋಟಿ ರೂಪಾಯಿಗಳನ್ನು ಕೊಡುತ್ತದೆಂದು ಏನು ಹೇಳಿದ್ದಾರೆ, ಅದಕ್ಕೆ ಕಟ್ಟುಬಿದ್ದು ನಿಲ್ಲಬೇಕು. ಕೃಷ್ಣಾ ಯೋಜನೆಯ ಕಾಮಗಾರಿಗಳು ಮುಗಿಸುವುದಕ್ಕೆ ಕೇಂದ್ರ ಸರ್ಕಾರದಿಂದ ನಮಗೆ 200 ಕೋಟಿ ರೂಪಾಯಿಗಳಷ್ಟು ಹಣ ಬರುತ್ತಿದೆಯೆಂದು ಈಗಾಗಲೇ ಸನ್ಮಾನ್ಯ ಭಾರಿ ನೀರಾವರಿ ಸಚಿವರು ರಾಜ್ಯಾದ್ಯಂತ ಹೇಳಿರುವುದಲ್ಲದೆ, ಕೇಂದ್ರ ಸರ್ಕಾರ ನಮಗೆ ಭರವಸೆ ನೀಡಿದ್ದು ಆ ಹಣವನ್ನು ಕೊಟ್ಟೇ ಕೊಡುತ್ತದೆ ಎಂದು ಜಗಜ್ಜಾಹೀರು ಮಾಡಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಹೇಳಿದ ತಕ್ಷಣ ಪ್ರಧಾನಮಂತ್ರಿಯವರು ಏನು ಹೇಳುತ್ತಾರೆಂದರೆ, "ಕ್ಷಿಪ್ರ ನೀರಾವರಿ ಅಭಿವೃದ್ಧಿ